2017 ಕ.ತೀ.ವ. 885

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

## ಶ್ರೀಮತಿ ಸುಭದ್ರಮ್ಮ –ವಿರುದ್ಧ– ಮುಲ್ಲಂಗಿ ನಾರಾಯಣಮ್ಮ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಅಡಿಯಲ್ಲಿನ ನಿಯತ ಎರಡನೇ ಅಪೀಲು.

ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ 41ನೇ ಕ್ರಮಾದೇಶದ 27ನೇ ನಿಯಮದ ಮೇರೆಗೆ ಅಪೀಲು ನ್ಯಾಯಾಲಯದಲ್ಲಿ ಹೆಚ್ಚುವರಿ ಸಾಕ್ಷ್ಯವನ್ನು ನೀಡುವುದಕ್ಕೆ ಅರ್ಜಿಯನ್ನು ಸಲ್ಲಿಸಲಾಗಿತ್ತು. (ಐ.ಎ.ಸಂಖ್ಯೆ.VII) ಹೆಚ್ಚುವರಿ ಸಾಕ್ಷ್ಯಕ್ಕಾಗಿ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸದೆ ಅಪೀಲು ನ್ಯಾಯಾಲಯವು ಹೊರಡಿಸಿದ ತೀರ್ಪಿನ ವಿರುದ್ಧ ಈ ಎರಡನೇ ನಿಯತ ಅಪೀಲನ್ನು ಸಲ್ಲಿಸಲಾಗಿದೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಕ್ರಮಾದೇಶದ 27ನೇ ನಿಯಮದ ಮೇರೆಗೆ ಹೆಚ್ಚುವರಿ ಸಾಕ್ಷ್ಯವನ್ನು ಅಂಗೀಕರಿಸಲು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸದಿರುವುದರಿಂದ ಕೆಳ ಅಪೀಲು ನ್ಯಾಯಾಲಯವು ನೀಡಿದ ತೀರ್ಪು ಕಾನೂನಿನಲ್ಲಿ ಸಮರ್ಥನೀಯವಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಕಾನೂನಿನ ಅನುಸಾರ ಗುಣಾರ್ಹತೆಗಳ ಮೇಲೆ ಅಪೀಲನ್ನು ಹೊಸದಾಗಿ ಪರಿಗಣಿಸಿ ತೀರ್ಮಾನಿಸಲು ನಿರ್ದೇಶಿಸಿ ಕಡತವನ್ನು ಹಿಂತಿರುಗಿಸಿದೆ.

* ನಿಯತ ಎರಡನೇ ಅಪೀಲು ಸಂಖ್ಯೆ: 5670/2013, ದಿನಾಂಕ: 9ನೇ ಜೂನ್, 2016.

***ಉಲ್ಲೇಖಿಸಲಾದ ಮೊಕದ್ದಮೆಗಳು:*** **ಪ್ಯಾರಾದಲ್ಲಿ**

1. *(2008) 12 ಎಸ್‌ಸಿಸಿ 762*
   *ಹಕಮ್ ಸಿಂಗ್ –ವಿರುದ್ಧ– ಹರಿಯಾಣ ಸರ್ಕಾರ (ಉಲ್ಲೇ) 4*
2. *(2012) 8 ಎಸ್‌ಸಿಸಿ 148*
   *ಭಾರತ ಸರ್ಕಾರ –ವಿರುದ್ಧ– ಇಬ್ರಾಹಿಂ ಉದ್ದೀನ್ (ಉಲ್ಲೇ) 4*

ಅರ್ಜಿದಾರರ ಪರ : ಶ್ರೀ ಆರ್.ಎಂ. ಕುಲಕರ್ಣಿ ಮತ್ತು ಶ್ರೀಮತಿ ಹೇಮಲೇಖಾ ಕೆ.ಎಸ್., ವಕೀಲರು.

1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀ ಗೊಡೆ ನಾಗರಾಜ್, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ:**

Iನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಬಳ್ಳಾರಿ ಇವರ ಆದೇಶದ ಮೇಲೆ ಅಧಿಕೃತ ದಾವೆ 226/2011ರಲ್ಲಿ ಪ್ರತಿವಾದಿ ಸಂಖ್ಯೆ 3 ಇವರು ಮತ್ತು Iನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಬಳ್ಳಾರಿ ಇವರಲ್ಲಿ ಆರ್.ಎ.79/2012 ರಲ್ಲಿ ಮೊದಲ ಅಪೀಲಿನಲ್ಲಿ ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಅಡಿಯಲ್ಲಿ ವಜಾಗೊಳಿಸಲು ಎರಡನೇ ಅಪೀಲನ್ನು ಪ್ರತಿವಾದಿ ಸಂಖ್ಯೆ 3 ಇವರು ದಾಖಲಿಸಿರುವರು. ಇದು ದಾವೆ ಷೆಡ್ಯೂಲ್ ಸ್ವತ್ತಿನ ಜಂಟಿ ಮಾಲೀಕರೆಂದು ವಾದಿಗಳನ್ನು ಘೋಷಿಸಲಾಗಿದೆ. ವೆಚ್ಚಗಳ ಭಾಗದ ಡಿಕ್ರಿಯಲ್ಲಿ ಪ್ರತಿವಾದಿ ಸಂ.2 ಇವರಿಂದ ಪರಿಹಾರ ಪಡೆದುಕೊಳ್ಳುವುದಕ್ಕೆ ವಾದಿಗಳು ಹಕ್ಕುಳ್ಳವರಾಗಿರುತ್ತಾರೆ ಎಂಬ ತೀರ್ಪನ್ನು ಆಕ್ಷೇಪಿಸಿರುವ ದಾವೆ ಇದಾಗಿದೆ. ವಿಚಾರಣಾ ನ್ಯಾಯಾಲಯವು ಹೊರಡಿಸಿದ ಈ ತೀರ್ಪಿನ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆಯ

96ನೇ ಪ್ರಕರಣದ ಅಡಿಯಲ್ಲಿ ಅಪೀಲನ್ನು ದಾಖಲಿಸಿದೆ ಮತ್ತು Iನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಬಳ್ಳಾರಿ, ಇವರ ಮುಂದೆ ಆರ್.ಎ. ಸಂಖ್ಯೆ 79/.2012ರಲ್ಲಿ ನೋಂದಾಯಿತವಾಗಿದೆ. ಹೆಚ್ಚುವರಿ ಸಾಕ್ಷ್ಯವನ್ನು ಸ್ವೀಕರಿಸುವುದಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆ ನಿಯಮ 27, ಕ್ರಮಾದೇಶ XLIನೇ ಅಡಿಯಲ್ಲಿ ಐ.ಎ.ಸಂಖ್ಯೆ VII ಅನ್ನು ದಾಖಲಿಸಲಾಗಿದೆ. ಸದರಿ ಅರ್ಜಿಯು ಮುಖ್ಯ ಅಪೀಲಿನೊಂದಿಗೆ ವಾದವನ್ನು ಆಲಿಸಲು ದಿನಾಂಕ: 18.03.2013ರಂದು ಆದೇಶಿಸಲಾಗಿದೆ. ಸದರಿ ಡಿಕ್ರಿಯನ್ನು ಪ್ರಶ್ನಿಸಿ ಈ ಎರಡನೇ ಅಪೀಲನ್ನು ದಾಖಲಿಸಿದ ಅರ್ಜಿ ಇದಾಗಿದೆ.

2. ದಿನಾಂಕ 02.04.2014 ರಂದು ಅಪೀಲನ್ನು ಅಂಗೀಕರಿಸಿದೆ. ಮುಖ್ಯವಾದ ಕಾನೂನು ಪ್ರಶ್ನೆಯನ್ನು ಪರಿಗಣಿಸುವುದಕ್ಕೆ ಅಂಗೀಕರಿಸಿದೆ ಅದು ಈ ಕೆಳಗಿನಂತಿದೆ:

> "(i) ಮೊದಲ ಅಪೀಲು ನ್ಯಾಯಾಲಯದಲ್ಲಿ ಅಪೀಲುದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ 27ನೇ ನಿಯಮದ 41ನೇ ಕ್ರಮಾದೇಶದ ಅಡಿಯಲ್ಲಿ ದಾಖಲಿಸಿದ ಐ.ಎ. ಯನ್ನು ಪರಿಗಣಿಸದಿರುವ ಮೊದಲು ಅಪೀಲು ನ್ಯಾಯಾಲಯದ ವಾದವು ಸಮರ್ಥನೀಯವಾಗಿದೆಯೇ?
>
> (ii) ಎರಡೂ ನ್ಯಾಯಾಲಯಗಳು ದಾಖಲೆ ಮೇಲೆ ಮಂಡಿತವಾದ ವಸ್ತು ವಿಷಯವನ್ನು ನಿರ್ಲಕ್ಷಿಸಿ ತೀವ್ರತರ ತಪ್ಪನ್ನು ಎಸಗಿರುವ ಮತ್ತು ಅದು ನೀಡಿದ ತೀರ್ಪು ದುರಾಗ್ರಹ ಮತ್ತು ಕಾನೂನು ಸಮ್ಮತವಾಗಿಲ್ಲದಿರುವುದು ಕಂಡು ಬಂದಿದೆಯೇ?"

3. ಎರಡು ಪಕ್ಷಕಾರರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಲಾಗಿದೆ ಮತ್ತು ಮಂಡಿಸಿದ ದಾಖಲೆಯನ್ನು ಅವಲೋಕಿಸಲಾಗಿದೆ. ಇಲ್ಲಿ ಪ್ರತಿಸ್ಪರ್ಧಿ

ವಾದಾಂಶಗಳನ್ನು ಮತ್ತು ಅಪೀಲನ್ನು ಪುರಸ್ಕರಿಸಲು ಬೇಕಾದ ನಿರ್ಣಯಗಳು ದಾಖಲಾಗುವವರೆಗೂ ಪರಿಗಣಿಸುವುದು ಅನವಶ್ಯಕವಾಗಿದೆ ಮತ್ತು ಕೆಳ ಅಪೀಲು ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಈ ಅಪೀಲಿನಲ್ಲಿ ಪ್ರಶ್ನಿಸಲಾಗಿದೆ. ಮೇಲೆ ಕ್ರಮಸಂಖ್ಯೆ (i) ರಲ್ಲಿ ಎತ್ತಲಾದ ಮುಖ್ಯವಾದ ಕಾನೂನು ಪ್ರಶ್ನೆಗೆ ಉತ್ತರವಾಗಿ ಕೊರತೆಯ ಕಾರಣವಾಗಿ ಈ ಪ್ರಶ್ನಿತ ಅಪೀಲನ್ನು ವಜಾಗೊಳಿಸಬಹುದಾಗಿದೆ. ಈ ಮೊಕದ್ದಮೆಯನ್ನು ಹೊಸದಾಗಿ ಪರಿಗಣಿಸುವುದಕ್ಕಾಗಿ ಪುನರ್ ವಿಚಾರಣೆಗೆ ಗುರಿಯಾಗುವವರೆಗೂ ಮೇಲಿನ ಕ್ರಮ ಸಂಖ್ಯೆ (ii) ರಲ್ಲಿ ಎತ್ತಲಾದ ಮುಖ್ಯವಾದ ಕಾನೂನು ಪ್ರಶ್ನೆಗೆ ಉತ್ತರವಾಗಿ ಅದನ್ನು ಪರಿಗಣಿಸುವುದು ಅನವಶ್ಯಕವಾಗಿದೆ.

4. ಪ್ರತ್ಯರ್ಜಿದಾರರು 1 ಮತ್ತು 2 ಇವರ ಪರವಾಗಿ ಮಾನ್ಯ ವಕೀಲರಾದ ಶ್ರೀ ಹರೀಶ ದೇಸಾಯಿಯವರು ಹಾಜರಾಗಿರುವರು. ಅದರಂತೆ ಅರ್ಜಿದಾರರ ಪರವಾಗಿ ಮತ್ತು ಪ್ರತ್ಯರ್ಜಿದಾರರ 3 ಮತ್ತು 4 ಇವರ ಪರವಾಗಿ ಮಾನ್ಯ ಎಚ್‌ಸಿಜಿಪಿ ಅವರು ಹಾಜರಾಗಿರುವರು. ಪ್ರತ್ಯರ್ಜಿದಾರ ಸಂಖ್ಯೆ 3 ಅವರ ಸಂಗತಿಯನ್ನು ಪ್ರತ್ಯರ್ಜಿದಾರ 1 ಮತ್ತು 2 ಇವರು ವಿವಾದಗೊಳಿಸಿರುವುದಿಲ್ಲ. ಈ ಅಪೀಲನ್ನು ಆರ್.ಎ. 79/2012ರಲ್ಲಿ ಸಿವಿಲ್ ದಂಡ ಪ್ರಕ್ರಿಯಾ ಸಂಹಿತೆಯ 27ನೇ ನಿಯಮದ 41ನೇ ಕ್ರಮಾದೇಶದಡಿಯಲ್ಲಿ ಐ.ಎ. VII ಯನ್ನು ದಾಖಲಿಸಲಾಗಿದೆ. ನಿರ್ವಿವಾದವಾಗಿ, ಸದರಿ ಅರ್ಜಿಯನ್ನು ಮುಖ್ಯ ಅಪೀಲಿನ ಜೊತೆಯಲ್ಲಿ ಸುನಾವಣೆ ಮಾಡಲು ಆದೇಶಿಸಿದೆ. ಕೆಳ ಅಪೀಲು ನ್ಯಾಯಾಲಯವು 08.07.2013ರಂದು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಅವಲೋಕಿಸಿದಾಗ ಅದರಲ್ಲಿ ಐ.ಎ. VIIಯನ್ನು ಪರಿಗಣಿಸದಿರುವುದನ್ನು ಮತ್ತು ಯಾವುದೇ ನಿರ್ಣಯಗಳನ್ನು ದಾಖಲಿಸದಿರುವುದನ್ನು ಕಾಣಬಹುದು. ಐ.ಎ. VII ಮೇಲೆ ಪ್ರತ್ಯೇಕವಾದ ಆದೇಶವನ್ನು ಹೊರಡಿಸಿರುವುದಿಲ್ಲ. ಅದರಿಂದ, ಐ.ಎ. VII ಯು ಪರಿಗಣನೆಗೆ ಒಳಗಾಗದೆ ಹಾಗೆ ಉಳಿದುಕೊಂಡಿದೆ. ಇದರಲ್ಲಿ ***ಹಕಮ್ ಸಿಂಗ್ –ವಿರುದ್ಧ – ಹರಿಯಾಣ ಸರ್ಕಾರ*** [1] ಮೊಕದ್ದಮೆಯಲ್ಲಿ

1. (2008) 12 ಎಸ್‌ಸಿಸಿ 762

ಅಪೀಲು ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಳ್ಳದೇ ಹಾಗೆ ಉಳಿದುಕೊಂಡಿರುವ ಅಪೀಲಿನಲ್ಲಿ ಹೆಚ್ಚುವರಿ ಸಾಕ್ಷ್ಯವನ್ನು ಅಂಗೀಕರಿಸುವುದಕ್ಕಾಗಿ ಸಿಪಿಸಿ (ಸಿವಿಲ್ ಪ್ರಕ್ರಿಯಾ ಸಂಹಿತೆಯ) 27ನೇ ನಿಯಮ 41ನೇ ಕ್ರಮಾದೇಶದ ಅಡಿಯಲ್ಲಿ ಅಪೀಲನ್ನು ವಿಲೇ ಮಾಡುವ ಸಲುವಾಗಿ ಅರ್ಜಿಯನ್ನು ದಾಖಲಿಸಿರುವುದು ಕಂಡು ಬರುತ್ತದೆ ಮತ್ತು ಆದಾಗ್ಯೂ ಅಪೀಲು ನ್ಯಾಯಾಲಯವೇ ಹೆಚ್ಚುವರಿ ಸಾಕ್ಷ್ಯಗಳಿಗಾಗಿ ಅರ್ಜಿಯ ಜೊತೆಯಲ್ಲಿ ಅದಕ್ಕನುಸಾರವಾಗಿ ಅಪೀಲನ್ನು ಹೊಸದಾಗಿಯೇ ಅದರ ಗುಣಾರ್ಹತೆಯ ಮೇಲೆ ಅಪೀಲು ನ್ಯಾಯಾಲಯ ಅದನ್ನು ನಿರ್ಣಯಿಸತಕ್ಕದ್ದು. ಇದರಂತೆ ಪ್ರಶ್ನಿತ ಆದೇಶವನ್ನು ವಜಾ ಮಾಡುವ ಮೂಲಕ, ಮೊಕದ್ದಮೆಯು ಅಪೀಲು ನ್ಯಾಯಾಲಯದಲ್ಲಿ ಉಳಿದುಕೊಳ್ಳುತ್ತದೆ ಎಂಬ ಸದರಿ ನಿರ್ಣಯವು ಪ್ರಸ್ತುತ ಮೊಕದ್ದಮೆಗೂ ಸಹ ಅನ್ವಯಿಸುತ್ತದೆ. ಹಾಗಾಗಿ, ಕೆಳ ಅಪೀಲು ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯನ್ನು ನಿರರ್ಥಕವೆಂದು ಅನೂರ್ಜಿತಗೊಳಿಸಲಾಗಿದೆ. ಪರಿಣಾಮವಾಗಿ, ಅಪೀಲನ್ನು ಪುರಸ್ಕರಿಸಿದೆ ಮತ್ತು 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಬಳ್ಳಾರಿ, ಇವರು ಆರ್.ಎ. ಸಂಖ್ಯೆ 79/2012ರಲ್ಲಿ ದಿನಾಂಕ 8.7.2013ರಂದು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ವಜಾ ಮಾಡಿದೆ. 18.03.2013ರಂದು ದಾಖಲಿಸಿದ ಐ.ಎ.VII ಜೊತೆಗೆ ಪರಿಗಣಿಸುವ ಸಲುವಾಗಿ ಮತ್ತು ಹೊಸದಾದ ನಿರ್ಣಯ ಮಾಡುವ ಸಲುವಾಗಿ Iನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಬಳ್ಳಾರಿ ಇವರಿಗೆ ಆರ್.ಎ.ಸಂಖ್ಯೆ 79/2012 ಕಡತವನ್ನು ಹಿಂದುರುಗಿಸಲಾಗಿದೆ. ಸದರಿ ಅರ್ಜಿಯುನ್ನು, ***ಭಾರತ ಸರ್ಕಾರ –ವಿರುದ್ಧ– ಇಬ್ರಾಹಿಂ ಉದ್ದೀನ್*** [2] ಮೊಕದ್ದಮೆಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 27ನೇ ನಿಯಮ, XLIನೇ ಕ್ರಮಾದೇಶದ ವ್ಯಾಪ್ತಿಯ ಮೇಲೆ ಅಪೆಕ್ಸ್ ನ್ಯಾಯಾಲಯ ನಿರೂಪಿಸಿದ ಕಾನೂನನ್ನು ದೃಷ್ಟಿಯಲ್ಲಿಟ್ಟುಕೊಳ್ಳುವ ಮೂಲಕ ಸದರಿ ಅರ್ಜಿಯನ್ನು ಪರಿಗಣಿಸಬೇಕಾಗಿದೆ.

2. (2012) 8 ಎಸ್‌ಸಿಸಿ 148

ಪಕ್ಷಕಾರರು 18.6.2016ರಂದು ಕೆಳ ಅಪೀಲು ನ್ಯಾಯಾಲಯದ ಮುಂದೆ ಹಾಜರಾಗುವುದಕ್ಕೆ ನಿರ್ದೇಶಿಸುತ್ತದೆ ಮತ್ತು ಅಲ್ಲಿ ಹೆಚ್ಚಿನ ಆದೇಶಗಳನ್ನು ಸ್ವೀಕರಿಸುವುದು. ಈ ಅಪೀಲಿನಲ್ಲಿ 16.09.2013ರಂದು ಹೊರಡಿಸಿದ ಮಧ್ಯಂತರ ಆದೇಶವು 18.06.2016ರ ವರೆಗೂ ಕಾರ್ಯಗತವಾಗಿರತಕ್ಕದ್ದು ಮತ್ತು ಅದು ಕೆಳ ನ್ಯಾಯಾಲಯವು ಅಪೀಲಿನಲ್ಲಿ ಪ್ರಶ್ನಿತ ಡಿಕ್ರಿಯನ್ನು ಅಮಲ್ಜಾರಿಯನ್ನು ಮಂಜೂರು ಮಾಡುವುದಕ್ಕೆ ವಿಸ್ತರಿಸುವುದಕ್ಕೆ ಅಥವಾ ಅನ್ಯಥಾ ತಡೆ ನೀಡುವುದಕ್ಕೆ ಪರಿಗಣಿಸುವುದು ಅಪೀಲನ್ನು ಅತಿ ಶೀಘ್ರವಾಗಿ ಮತ್ತು 31.08.2016ಕ್ಕಿಂತ ಮುಂಚಿತವಾಗಿ ನಿರ್ಣಯಿಸುವುದು. ರಿಜಿಸ್ಟ್ರೀಯು ಈ ಕೂಡಲೇ ಕೆಳ ನ್ಯಾಯಾಲಯದ ದಾಖಲೆಗಳನ್ನು Iನೇ ಹೆಚ್ಚುವರಿ ಹಿರಿಯ ನ್ಯಾಯಾಧೀಶರು, ಬಳ್ಳಾರಿ ಇವರಿಗೆ ಕೂಡಲೇ ಕಳುಹಿಸುವುದಕ್ಕೆ ನಿರ್ದೇಶಿಸುತ್ತದೆ.